

ಕಾಮೆಂಟು ಹಾಕಿದರು. ಮಾರನೇ ದಿನದ ಪತ್ರಿಕೆಗಳಲ್ಲಿ ಕನ್ನಡ ಸಂಘದ ಕಾನೂನುಬಾಹಿರ ಚುನಾವಣೆಯದ್ದೇ ಮುಖಪುಟ ಸುದ್ದಿ. ರಾಜ್ಯದ ನಾನಾ ಊರುಗಳಿಂದ ಸಾಹಿತಿಗಳು ಕನ್ನಡ ಸಂಘದ ಕಾನೂನುಬದ್ಧ ಮರುಚುನಾವಣೆಗೆ ಆಗ್ರಹಿಸಿ ಬಸವಾಪುರಕ್ಕೆ ಬಂದಿಳಿದು ಕಪ್ಪು ಬಾವುಟ ಹಿಡಿದು ಕನ್ನಡ ಸಂಘದತ್ತ ಘೋಷಣೆ ಕೂಗುತ್ತ ಮೆರವಣಿಗೆ ಹೊರಟರು.

ಜ್ವರದಲ್ಲಿ ಮಲಗಿದ್ದ ಗುರ್ಲಿಂಗ ಗಡಬಡಿಸಿ ಎದ್ದ. ಪತ್ರಿಕಾಗೋಷ್ಠಿಯ ನಂತರದ ಸಂಗತಿಗಳಿಂದ ಥರಗುಟ್ಟಿಹೋಗಿದ್ದ ಗುರ್ಲಿಂಗ ಅದೆಲ್ಲ ಕನಸು ಎಂದು ತಿಳಿದು ಕೊಂಚ ನಿರಾಳವಾದ. ಪತ್ರಿಕಾಗೋಷ್ಠಿ ನಡೆಸುವುದೋ ಬೇಡವೋ ಎಂದು ಮತ್ತೆ ಗುರ್ಲಿಂಗ ಗೊಂದಲಕ್ಕೆ ಬಿದ್ದ. ವಿಷಯ ಬಹಿರಂಗಗೊಂಡ ನಂತರ ನಡೆವ ಬೆಳವಣಿಗೆಗಳನ್ನೆಲ್ಲ ನೆನೆದು ಕೆಲವರು ಮಾಡಿದ ಅನಾಚಾರಕ್ಕೆ ಶತಮಾನದ ಕನ್ನಡ ಸಂಘಕ್ಕೆ ಅಪವಾದ ತಗುಲಿಕೊಳ್ಳಬಾರದು, ಈಗ ಪತ್ರಿಕಾಗೋಷ್ಠಿ ಬೇಡ ಎಂದು ನಿರ್ಧರಿಸಿದ. ಗಡಿಯಾರ ನೋಡಿದರೆ ಮಧ್ಯರಾತ್ರಿ ಹನ್ನೆರೆಡಾಗಿತ್ತು. ಈ ಹೊತ್ತಲ್ಲಿ ತಿಪ್ಪಣ್ಣನಿಗೆ ಹೇಗೆ ಫೋನು ಮಾಡುವುದು ಎಂದು ಕೊಂಚ ಹಿಂದೇಟು ಹಾಕಿದ ಗುರ್ಲಿಂಗ ಇದೊಂದು ಸಾರಿ ಮಾಡಿಬಿಡ್ತೇನೆ ಎಂದು ನಂಬರು ಒತ್ತಿದ. ಆಕಳಿಸುತ್ತಲೇ ಕರೆ ಸ್ವೀಕರಿಸಿದ ತಿಪ್ಪಣ್ಣನಿಗೆ 'ತನ್ನ ಆರೋಗ್ಯ ಸರಿಯಿಲ್ಲ, ನಡೆಯಲೂ ಆಗುತ್ತಿಲ್ಲ. ಪತ್ರಿಕಾಗೋಷ್ಠಿ ಮುಂದೆ ಹಾಕೋಣ' ಎಂದ. 'ಎಲ್ಲರಿಗೂ ತಿಳಿಸಿಯಾಗಿದೆ, ಪತ್ರಿಕಾಗೋಷ್ಠಿ ಮುಂದೆ ಹಾಕಲು ಸಾಧ್ಯವೇ ಇಲ್ಲ' ಎಂದು ಮೊದಲು ವಾದಿಸಿದ ತಿಪ್ಪಣ್ಣ ಗುರ್ಲಿಂಗನ ದನಿ ಕೇಳಿ ಆತನಿಗೆ ನಿಜಕ್ಕೂ ಹುಶಾರಿಲ್ಲ ಎಂದುಕೊಂಡು ಅದಕ್ಕೊಪ್ಪಿ 'ಆಯ್ತು ಬಿಡು, ಬೆಳಿಗ್ಗೆ ಎಲ್ಲ ಪತ್ರಿಕೆ, ಟಿವಿಗಳಿಗೆ ಇದನ್ನು ತಿಳಿಸುತ್ತೇನೆ' ಎಂದ.

ಅಷ್ಟರಲ್ಲಾಗಲೇ ಪ್ರಕರಣ ಹೊಸ ತಿರುವು ಪಡೆದುಬಿಟ್ಟಿತ್ತು. ತಿಪ್ಪಣ್ಣನಿಂದ ಹೊರಬಿದ್ದ ಗುರ್ಲಿಂಗ ಪತ್ರಿಕಾಗೋಷ್ಠಿ ಕರೆದಿರುವ ವಿಷಯ ಹಿಂದಿನ ದಿನವೇ ರುದ್ರಮುನಿಗೆ, ಆತನ ಬಾಮೈದ ಪತ್ರಕರ್ತನಿಂದ ತಿಳಿದುಬಿಟ್ಟಿತ್ತು.

ಗುರ್ಲಿಂಗ ಹೀಗೆ ಮಾಡುತ್ತಾನೆಂದು ನಿರೀಕ್ಷಿಸಿರದ ರುದ್ರಮುನಿ ಬೆಚ್ಚಿಬಿದ್ದ. ಬೆಳಗಾದರೆ ತನ್ನ ಮಾನ ಮರ್ಯಾದೆ ಬೀದಿ ಪಾಲಾಗುತ್ತದೆಂದು ಬೆದರಿದ. ಇದರಿಂದ ತನಗೆ ಬ್ಯಾಂಕಿನ ಅಧ್ಯಕ್ಷ ಹುದ್ದೆಯಿಂದಲೂ ಕೆಳಗಿಳಿಯುವಂತೆ ಒತ್ತಾಯ ಬರಬಹುದು ಎಂದು ಕಳವಳಿಸಿದ. ಇದರಿಂದ ಪಾರಾಗುವ ಉಪಾಯ ಪಡೆಯಲು ಕುಮಾರಪ್ಪನಿಗೂ ಪಾಟೀಲಪ್ಪನಿಗೂ ತುರ್ತಾಗಿ ತನ್ನ ಮನೆಗೆ ಬರುವಂತೆ ಕರೆ ಮಾಡಿ ಕಾರು ಕಳಿಸಿಕೊಟ್ಟ. ಪಾಟೀಲಪ್ಪ 'ಮನೆಗೆ ನೆಂಟರು ಬಂದಿದ್ದಾರೆ, ಸ್ವಲ್ಪ ತಡೆದು ಬರುತ್ತೇನೆ' ಎಂದು ಕಾರನ್ನು ವಾಪಸು ಕಳಿಸಿದ. ಕುಮಾರಪ್ಪನೊಬ್ಬನೇ ರುದ್ರಮುನಿಯ ಮನೆಗೆ ಬಂದು ವಿಷಯ ತಿಳಿದು ಬೆವರು ಒರೆಸಿಕೊಂಡ. 'ಯಾರಾದರೂ ಮನೆಗೆ ಬಂದರೆ ತಾನು ಮನೆಯಲ್ಲಿ ಇಲ್ಲ ಎಂದು ಹೇಳಿ ಕಳಿಸು' ಎಂದು ಹೆಂಡತಿಗೆ ತಿಳಿಸಿದ ರುದ್ರಮುನಿ ಕುಮಾರಪ್ಪನನ್ನು ಕರೆದುಕೊಂಡು ಮಹಡಿಯ ರೂಮೊಂದಕ್ಕೆ ಹೋಗಿ ಬಾಗಿಲು ಹಾಕಿಕೊಂಡ.

ರುದ್ರಮುನಿಯ ಮನೆಯಿಂದ ಕುಮಾರಪ್ಪ ಯಾವಾಗ ತನ್ನ ಮನೆಗೆ ಮರಳಿದನೋ ಯಾರಿಗೂ ತಿಳಿಯಲಿಲ್ಲ. ಆದರೆ ಮರುದಿನವಿನ್ನೂ ಕಣ್ಣು ಬಿಡುವ ಮುನ್ನವೇ ಆ ಇಬ್ಬರೂ ತಮ್ಮ ತಮ್ಮ ಮನೆಗಳಿಂದ ನೇರ ಕನ್ನಡ ಸಂಘಕ್ಕೆ ಹೋಗಿ ಅಯ್ಯಯ್ಯೋ ಎಂದು ಕೂಗಾಡತೊಡಗಿದ್ದರು.

ಪವಾಡವೆಂಬಂತೆ ಇದೇ ಹೊತ್ತಿಗೆ, ತಾವು ದಾನ ಮಾಡಿದ ಭಗವದ್ಗೀತೆ ಪುಸ್ತಕವನ್ನು ಸುಡುವ ಉದ್ದೇಶದಿಂದಲೇ ಗ್ರಂಥ ಭಂಡಾರಕ್ಕೆ ಧರ್ಮವಿರೋಧಿಗಳು ಬೆಂಕಿ ಕೊಟ್ಟಿದ್ದಾರೆ ಎಂದು ಧರ್ಮೋದ್ಧಾರಕ ಸಂಘದ ನೂರಾರು ಜನರು ಧಿಕ್ಕಾರ ಕೂಗುತ್ತ ಆಕ್ರೋಶದಿಂದ ಕನ್ನಡ ಸಂಘದತ್ತ ದೌಡಾಯಿಸುತ್ತಿದ್ದರು.

ಕನ್ನಡ ಸಂಘದ ಗ್ರಂಥ ಭಂಡಾರ ಧಗಧಗನೇ ಹೊತ್ತಿ ಉರಿಯುತ್ತಿತ್ತು... •